element ಕೂಡ ಬೆಂಗಳೂರು ಅಂಥ ಸಿಟಿಯಲ್ಲಿ, ಮೈಸೂರು ಸಿಟಿಯಾಗಲಿ, ಬೆಳಗಾಂ ಆಗಲಿ ಇಂಥ ಕಡೆ ಮಿಸ್‌ಯೂಸ್ ಮಾಡಿರುವುದನ್ನು ನಾವು ನೋಡಿದ್ದೇವೆ. ಅದಕ್ಕಾಗಿ ಆ ರೈಡರ್ ಹಾಕಿದ್ದು, ದಯವಿಟ್ಟು ಇದೆಲ್ಲವನ್ನು ಗಮನದಲ್ಲಿಟ್ಟುಕೊಂಡು ಬೇಗನೆ ಒಂದು ಅಮೆಂಡ್‌ಮೆಂಟ್ ತನ್ನಿ. ಇಲ್ಲದಿದ್ದರೆ ತಾವು ಒಂದು ಆರ್ಡಿನೆನ್ಸ್‌ನ್ನು ಇಶ್ಯೂ ಮಾಡಿ. ಏಕೆಂದರೆ ಎಂತೆಂಥದಕ್ಕೊ ಆರ್ಡಿನೆನ್ಸ್ ಇಶ್ಯೂ ಮಾಡುತ್ತೇವೆ. ಇದನ್ನು ಪ್ರೊಟೆಕ್ಟ್ ಮಾಡುವುದಕ್ಕೆ ಆರ್ಡಿನೆನ್ಸ್ ತಂದರೆ ಎಲ್ಲರು ಸಪೋರ್ಟ್ ಮಾಡುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ನಾನು ಇದರ ಬಗ್ಗೆ ಸ್ಪಷ್ಟವಾಗಿ ಹೇಳಿದ್ದೇನೆ. ಈಗ ಕಾನೂನು ತಿದ್ದುಪಡಿ ಮಾಡಿ ರೈತರೇನು ಅಕ್ರಮವಾಗಿ ಸಾಗುವಳಿ ಮಾಡುತ್ತಿದ್ದಾರೆ ಅವರ ರಕ್ಷಣೆ ಮಾಡುವುದರ ಬಗ್ಗೆ ಕ್ರಮ ಕೈಗೊಳ್ಳುತ್ತೇನೆ. ಈಗಾಗಲೇ ಕಾನೂನು ಇಲಾಖೆಯ ಜೊತೆ ನಾನು ಮಾತನಾಡಿದ್ದೇನೆ. ಅವರಿಗೆ ರೆಫರೆನ್ಸ್ ಮಾಡಿದ್ದೇನೆ. ಕಾನೂನು ತಿದ್ದುಪಡಿಯ ಬಗ್ಗೆಯೂ ಆಲೋಚನೆ ಮಾಡುತ್ತಿದ್ದೇನೆ. ಉಳಿದ ವಿಷಯದ ಬಗ್ಗೆಯೂ ಆಲೋಚನೆ ಮಾಡಿ ರೈತರೇನು ಅಕ್ರಮವಾಗಿ ಸಾಗುವಳಿ ಮಾಡುತ್ತಿದ್ದಾರೆ ಅವರ ರಕ್ಷಣೆ ಮಾಡುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳುತ್ತದೆಂದು ನಾನು ಆಗಲೆ ಹೇಳಿದ್ದೇನೆ. ಮತ್ತೊಮ್ಮೆ ಹೇಳುತ್ತೇನೆ.

ಶ್ರೀ ಆರ್.ವಿ. ದೇಶ್‌ಪಾಂಡೆ : We have to take care of this.

ಶ್ರೀ ಜಗದೀಶ್‌ಶೆಟ್ಟರ್ : ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹಿರಿಯ ಸದಸ್ಯರು, ಅನುಭವವಿರತಕ್ಕವರು. ಅವರು ಇದರ ಬಗ್ಗೆ ಸಾಕಷ್ಟು ವಿಚಾರಗಳನ್ನು ಹೇಳಿದ್ದಾರೆ. ಅವರ ವಿಚಾರಗಳನ್ನು ಗಮನದಲ್ಲಿ ಇಟ್ಟುಕೊಂಡು ಕಾನೂನು ವ್ಯಾಪ್ತಿಯಲ್ಲಿ ಸರ್ಕಾರದಿಂದ ಏನೇನು ಮಾಡಲಿಕ್ಕೆ ಸಾಧ್ಯವಿದೆಯೊ ಅದನ್ನು ನಾವು ಮಾಡುತ್ತೇವೆ.

ಶ್ರೀ ಹೆಚ್. ನಿಂಗಪ್ಪ : ಅದರ ಬಗ್ಗೆ ತಿದ್ದುಪಡಿ ತರುವುದಕ್ಕೆ ಲೇಟಾಗುತ್ತದೆ. ಮಾನ್ಯ ಖರ್ಗೆ ಸಾಹೇಬರು ಹೇಳಿದಂತೆ ಸುಗ್ರೀವಾಜ್ಞೆ ಹೊರಡಿಸಿದರೆ ಒಳ್ಳೆಯದು.

ಶ್ರೀ ಎಸ್. ರಾಜೇಂದ್ರನ್ : ಮಾನ್ಯ ಅಧ್ಯಕ್ಷರೆ, ಸೈಂಟಿಸ್ಟ್ ತೀರಿಹೋಗಿರುವ ಬಗ್ಗೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಕೊಡುತ್ತೇನೆಂದು ಹೇಳಿದ್ದಿರಿ. ಅದರ ಬಗ್ಗೆ ಅರ್ಧ ಗಂಟೆ ಚರ್ಚೆ ಮಾಡಿ ಎಂದು ತಾವೇ ಹೇಳಿದ್ದಿರಿ.

ಅಧ್ಯಕ್ಷರು : ಅದು ಈವತ್ತು ಇಲ್ಲ.

12. ಅರ್ಧ ಗಂಟೆ ಕಾಲ ಚರ್ಚೆ

(ಅ) ವಿಷಯ: ನೈಸರ್ಗಿಕ ವಿಕೋಪದಿಂದ ಆದಂಥ ಹಾನಿಯ ಬಗ್ಗೆ ನೀಡಿರುವ ಪರಿಹಾರ

ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗ) : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಕಳೆದ ಹಲವಾರು ವರ್ಷಗಳಿಂದ ಮಳೆ ಹಾನಿ ಮತ್ತು ಪ್ರವಾಹ, ಬರ ಇನ್ನಿತರ ನೈಸರ್ಗಿಕ ವಿಕೋಪದಿಂದ ಆಗಿರುವ ಹಾನಿಯ ಬಗ್ಗೆ ಸುದೀರ್ಘವಾಗಿ ಚರ್ಚೆ ಮಾಡಲು ಅರ್ಧ

ಗಂಟೆ ಕಾಲ ಚರ್ಚೆಗೆ ಅವಕಾಶ ಕೊಡಬೇಕೆಂದು ನಾನು ಮತ್ತು ನಮ್ಮ ಇನ್ನಿತರ ಹಿರಿಯ ಸದಸ್ಯರುಗಳು ಕೇಳಿಕೊಂಡಂಥ ಸಂದರ್ಭದಲ್ಲಿ ತಾವು ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೀರಿ, ತಮಗೆ ವಂದನೆಗಳನ್ನು ಸಲ್ಲಿಸುತ್ತೇನೆ. ನೈಸರ್ಗಿಕ ವಿಕೋಪದ ಸಲುವಾಗಿ ನಮ್ಮ ರಾಷ್ಟ್ರದಲ್ಲಿ ಕೇಂದ್ರ ಸರ್ಕಾರ 9ನೇ ಹಣಕಾಸಿನ ಆಯೋಗ ಪ್ರಾರಂಭವಾದಂಥ ಸಂದರ್ಭದಲ್ಲಿ ಬರ ಪರಿಹಾರ ಮತ್ತು ಪ್ರವಾಹ ಬಂದಂಥ ಸಂದರ್ಭದಲ್ಲಿ ಯಾವ ತರಹ ಕ್ರಮಗಳನ್ನು ತೆಗೆದುಕೊಳ್ಳಬೇಕು, ಯಾವ ತರಹ ಕೇಂದ್ರ ಸರ್ಕಾರ ರಾಜ್ಯ ಸರ್ಕಾರ ಹಣ ವಿನಿಯೋಗ ಮಾಡಬೇಕು ಎಂಬ ಬಗ್ಗೆ 9ನೇ ಹಣಕಾಸು ಆಯೋಗ ಒಂದು ಯೋಜನೆಯನ್ನು ತಯಾರು ಮಾಡಿದರು. ಅಂದಿನಿಂದ ಹಿಡಿದು ಈವತ್ತು ಏನು 12ನೇ ಹಣಕಾಸಿನ ಆಯೋಗದ ಶಿಫಾರಸ್ಸು ನಮ್ಮ ರಾಜ್ಯದಲ್ಲಿ ನಮ್ಮ ರಾಷ್ಟ್ರದಿಂದ ಜಾರಿಗೆ ಕೊಟ್ಟಿದ್ದಾರೆ ಈವತ್ತಿನವರೆಗೆ ಕೂಡ ನಮ್ಮ ರಾಜ್ಯಕ್ಕೆ ಬಹಳ ಅನ್ಯಾಯವಾಗುತ್ತಾ ಬಂದಿದೆ. 9ನೇ ಹಣಕಾಸು ಆಯೋಗ ಆದಮೇಲೆ ಎರಡು ರೀತಿಯ ಹಣವನ್ನು ಈ ನೈಸರ್ಗಿಕ ವಿಕೋಪಕ್ಕೆ ಕೊಡುತ್ತಾರೆ. ಅದರಲ್ಲಿ ಮೊದಲನೆಯದಾಗಿ ನೈಸರ್ಗಿಕ ವಿಕೋಪ ನಿಧಿ. ಅಂದರೆ ಸಿ.ಆರ್.ಎಫ್. ಇನ್ನೊಂದು ಎನ್.ಸಿ.ಸಿ.ಎಫ್. ಅಂದರೆ ರಾಷ್ಟ್ರೀಯ ವಿಕೋಪ ಸಂಚಿತ ನಿಧಿ. ನಾನು ಮೊದಲು ಸಿ.ಆರ್.ಎಫ್. ಬಗ್ಗೆ ಮಾತನಾಡುತ್ತೇನೆ. ನೈಸರ್ಗಿಕ ವಿಕೋಪ ನಿಧಿಯನ್ನು ಕೇಂದ್ರ ಸರ್ಕಾರ ಪ್ರತಿ ವರ್ಷ ಎಷ್ಟು ಹಣವನ್ನು ರಾಜ್ಯಗಳಿಗೆ ಕೊಡಬೇಕೆಂದು ಎಲ್ಲಾ ರಾಜ್ಯಗಳಿಗು ಫಿಕ್ಸ್ ಮಾಡಿಬಿಟ್ಟಿದೆ. ರಾಜ್ಯ ಸರ್ಕಾರ ಹಣವನ್ನು ಕೇಳಬೇಕಾಗಿಲ್ಲ. ಆಟೊಮೆಟಿಕ್ ಆಗಿ ಎರಡು ಅಥವಾ ಮೂರು ಕಂತುಗಳಲ್ಲಿ ಸಂಪೂರ್ಣವಾಗಿ ಹಣವನ್ನು ಬಿಡುಗಡೆ ಮಾಡುತ್ತಾರೆ. That is a fixed amount. ಈ ನೈಸರ್ಗಿಕ ವಿಕೋಪ ನಿಧಿಯಲ್ಲಿ 75 ಪರ್‌ಸೆಂಟ್ Central Government 25 ಪರ್‌ಸೆಂಟ್ ರಾಜ್ಯ ಸರ್ಕಾರ ಹಾಕಬೇಕಾಗುತ್ತದೆ. ಪ್ರತಿ ವರ್ಷ ಇವರು ಕೇಳಲಿ, ಬಿಡಲಿ ಅದು ಟೈಮ್ ಬೌಂಡ್‌ನಲ್ಲಿ ಹಣ ಬರುತ್ತಲೇ ಇರುತ್ತದೆ. ಇದರಲ್ಲಿ ನಮ್ಮ ರಾಜ್ಯಕ್ಕೆ ಬಹಳ ಅನ್ಯಾಯವಾಗಿದೆ. ರಾಜ್ಯಕ್ಕೆ ಯಾವ ರೀತಿ ಅನ್ಯಾಯವಾಗಿದೆ ಎಂದರೆ, ಅವರು ಇದನ್ನು ಯಾವ ರೀತಿ ಫಿಕ್ಸ್ ಮಾಡುತ್ತೇವೆಂದು ಅವರ ಆದೇಶದಲ್ಲಿ ಹೇಳುತ್ತಾರೆ. 12ನೇ ಹಣಕಾಸಿನ ಆಯೋಗದವರು ಶಿಫಾರಸ್ಸಿನಲ್ಲಿ ಏನು ಹೇಳಿದ್ದಾರೆಂದರೆ, the present scheme of C.R.F. is essentially based on the recommendation of the 9th Commission. ಇದರಿಂದ ಏನು ಅನ್ಯಾಯ ನಮಗೆ ಆಗುತ್ತಿದೆ ಎಂದರೆ, ಅತ್ಯಂತ ಅವೈಜ್ಞಾನಿಕವಾದ ಆಧಾರದ ಮೇಲೆ 12ನೇ ಹಣಕಾಸಿನ ಆಯೋಗದವರು ಫಿಕ್ಸ್ ಮಾಡಿದ್ದಾರೆ. ಸಿ.ಆರ್.ಎಫ್. ಹಣವನ್ನು ಕೊಡುವ ಸಂದರ್ಭದಲ್ಲಿ ಯಾವ ರೀತಿಯಾಗಿ ಫಿಕ್ಸ್ ಮಾಡಬೇಕಾಗಿತ್ತೆಂದರೆ, ರಾಜ್ಯದ ಭೌಗೋಳಿಕ ವಿಸ್ತೀರ್ಣವನ್ನು ಮೊದಲು ನೋಡಬೇಕು. ರಾಜ್ಯದಲ್ಲಿ ಎಷ್ಟು ಒಣ ಮತ್ತು ಬರ ಪ್ರದೇಶವಿದೆ? ನೀರಾವರಿ ಎಷ್ಟಿದೆ? ಪ್ರವಾಹ ಎಷ್ಟು ಕಡೆ ಬರುತ್ತದೆ? ಕೂಲಿಕಾರರ ಸಂಖ್ಯೆ ಎಷ್ಟಿದೆ? ಜನಸಂಖ್ಯೆ ಎಷ್ಟಿದೆ? ಬಡತನ ಎಷ್ಟು ಪ್ರಮಾಣದಲ್ಲಿದೆ? ಎಸ್‌ಸಿ ಮತ್ತು

ಎಸ್‌ಟಿ ಜನಸಂಖ್ಯೆ ಎಷ್ಟು? ಇದು ಯಾವುದೆ ಆಧಾರವನ್ನು ತೆಗೆದುಕೊಂಡಿಲ್ಲ. ಕೇವಲ ಒಂದು ಆಧಾರ ಏನೆಂದರೆ, ಹಿಂದೆ ನೀವು ಇಷ್ಟೆ ಹಣ ಖರ್ಚು ಮಾಡುತ್ತಿದ್ದಿರಿ, ಆ ಹಣ ಕೊಟ್ಟಿದ್ದಕ್ಕಷ್ಟೆ ಮುಂದುವರೆಸಿಕೊಂಡು ಹೋಗಿದ್ದೀರಿ ಎನ್ನುವ ಮಾತನ್ನು ಹೇಳಿದ್ದಾರೆ. ಆದ್ದರಿಂದ ದಯವಿಟ್ಟು ನಮಗಿಂತ ಚಿಕ್ಕ ರಾಜ್ಯಗಳಿಗೆ ಎಷ್ಟು ಹಣ ಬರುತ್ತದೆ ನೋಡಿ. ಆ ರಾಜ್ಯಗಳ ಸಾಮಾಜಿಕ ಮತ್ತು ಆರ್ಥಿಕ ಅಂಶವನ್ನು ನೋಡಬೇಕಾಗುತ್ತದೆ. ಅಸ್ಸಾಂ– ಭೌಗೋಳಿಕ ವಿಸ್ತೀರ್ಣ: .78, ಜನಸಂಖ್ಯೆ: 2 ಕೋಟಿ 66 ಲಕ್ಷ, ಎಸ್‌ಸಿ ಮತ್ತು ಎಸ್‌ಟಿ ಜನಸಂಖ್ಯೆ: 10.06, ಕೂಲಿಕಾರರ ಸಂಖ್ಯೆ: 25 ಪರ್‌ಸೆಂಟ್, ಅಲ್ಲಿಗೆ ಈ ವರ್ಷ 193 ಕೋಟಿ ಕೇಂದ್ರ ಸರ್ಕಾರ ಕೊಡುತ್ತದೆ. ಮುಂದಿನ ವರ್ಷ 198 ಕೋಟಿ ಕೊಡುತ್ತದೆ. ಬಿಹಾರ್, ಭೌಗೋಳಿಕ ವಿಸ್ತೀರ್ಣ: .94, ಜನಸಂಖ್ಯೆ ಅಲ್ಲಿ ಜಾಸ್ತಿ ಇದೆ. ಆದರೆ ಎಸ್‌ಸಿ ಮತ್ತು ಎಸ್‌ಟಿ ಜನಸಂಖ್ಯೆ ಕರ್ನಾಟಕಕ್ಕಿಂತ ಕಡಿಮೆ ಇದೆ. ಇದೆಲ್ಲಾ ಕರ್ನಾಟಕಕ್ಕಿಂತ ಕಡಿಮೆ ಇದೆ. 16.06 ಇದೆ. ಅಲ್ಲಿಗೆ 149 ಕೋಟಿ ಹಣ ಬರುತ್ತದೆ. ಛತ್ತೀಸ್‌ಘಡ್, ಭೌಗೋಳಿಕ ವಿಸ್ತೀರ್ಣ: 1.35, ಜನಸಂಖ್ಯೆ: 2 ಕೋಟಿ 8 ಲಕ್ಷ, ಕೂಲಿಕಾರರ ಸಂಖ್ಯೆ: 33 ಪರ್‌ಸೆಂಟ್, ಅಲ್ಲಿಗೆ 112 ಕೋಟಿ ಬರುತ್ತದೆ. ಗುಜರಾತ್, ಭೌಗೋಳಿಕ ವಿಸ್ತೀರ್ಣ: 1.96 ಲಕ್ಷ ಚದರ ಕಿಲೋಮೀಟರ್, ನಮ್ಮ ಕರ್ನಾಟಕದ್ದು ಅಷ್ಟೆ ಇದೆ. ಅಂದರೆ 1.92 ಕರ್ನಾಟಕ ಮತ್ತು ಗುಜರಾತ್ ಜನಸಂಖ್ಯೆಯಲ್ಲಿ 5 ಕೋಟಿ 7 ಲಕ್ಷ, ಕರ್ನಾಟಕ ಮತ್ತು ಗುಜರಾತ್ ಭೌಗೋಳಿಕ ವಿಸ್ತೀರ್ಣದಲ್ಲಿ ಮತ್ತು ಜನಸಂಖ್ಯೆಯಲ್ಲಿ ಹೆಚ್ಚು ಕಮ್ಮಿ ಅಷ್ಟೇ ಇದೆ. ಎಸ್‌ಸಿ ಮತ್ತು ಎಸ್‌ಟಿ 21 ಪರ್‌ಸೆಂಟ್, ಕೂಲಿಕಾರರ ಸಂಖ್ಯೆ: 33.6, ಅಲ್ಲಿ ಜಿಡಿಪಿ, ಅಂದರೆ ಪರ್‌ಕ್ಯಾಪಿಟಾ ಇನ್‌ಕಂ, ಕರ್ನಾಟಕಕ್ಕಿಂತ ಜಾಸ್ತಿ ಇದೆ. 27 ಸಾವಿರ ಇದೆ. ಗುಜರಾತ್‌ಗೆ 246 ಕೋಟಿ ಹಣ ಕೊಡುತ್ತಾರೆ. ಹರಿಯಾಣ, ಭೌಗೋಳಿಕ ವಿಸ್ತೀರ್ಣ: .44, ಅಲ್ಲಿಗೆ 125 ಕೋಟಿ ಕೊಟ್ಟಿದ್ದಾರೆ. ಜಾರ್ಖಂಡ್‌ಗೆ 126 ಕೋಟಿ, ಒರಿಸ್ಸಾಗೆ 301 ಕೋಟಿ ಕೊಡುತ್ತಾರೆ. ಪಂಜಾಬ್‌ನ ಬೌಗೋಳಿಕ ವಿಸ್ತೀರ್ಣ: .49, ಅಲ್ಲಿನ ಜನಸಂಖ್ಯೆ 2 ಕೋಟಿ 40 ಲಕ್ಷ, ಇಂತಹ ಪಂಜಾಬ್‌ಗೆ 146 ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದಾರೆ. Irrigation is 92% in Punjab. Rajasthan ಕ್ಕೆ 416 ಕೋಟಿ ರೂಪಾಯಿಗಳನ್ನು, ತಮಿಳುನಾಡಿಗೆ 209 ಕೋಟಿ ರೂಪಾಯಿಗಳನ್ನು, ಮಹಾರಾಷ್ಟ್ರಕ್ಕೆ 220 ಕೋಟಿ ರೂಪಾಯಿಗಳನ್ನು, ಆಂಧ್ರ ಪ್ರದೇಶಕ್ಕೆ 346 ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಈಗ ನಾನು ಕರ್ನಾಟಕಕ್ಕೆ ಬರುತ್ತೇನೆ. ಕರ್ನಾಟಕದ ವಿಸ್ತೀರ್ಣ 1 ಲಕ್ಷ 92 ಸಾವಿರ Sq. Km. ಇದೆ, ಜನಸಂಖ್ಯೆ 5 ಕೋಟಿ 28 ಲಕ್ಷ ಇದೆ, SC/ST ಜನಸಂಖ್ಯೆ 22.6% ಇದೆ. ನಮ್ಮಲ್ಲಿ ಕೂಲಿಕಾರರ ಸಂಖ್ಯೆ ಒಟ್ಟು ಜನಸಂಖ್ಯೆಯು 36.6% ಇದೆ. ನಮ್ಮ ವಾರ್ಷಿಕ ಸರಾಸರಿ, per capita income 21,000 ಆಗಿದೆ. ನಾನು ಈಗಾಗಲೇ ಹೇಳಿದ ಎಲ್ಲಾ ರಾಜ್ಯಗಳ income ನಮ್ಮ ರಾಜ್ಯಕ್ಕಿಂತ ಜಾಸ್ತಿ ಇದೆ, ಪ್ರದೇಶ ಕಡಿಮೆ ಇದೆ ಮತ್ತು ಬರ ಪ್ರದೇಶ ಕೂಡ ಕಡಿಮೆ ಇದೆ. Irrigation ಕೂಡ ಅತಿ

ಹೆಚ್ಚು ಇದೆ, Flood ಯಾವುವೂ ಬರುತ್ತಿಲ್ಲ. ಇವತ್ತು ನಮ್ಮ ರಾಷ್ಟ್ರದಲ್ಲಿ ರಾಜಾಸ್ಥಾನವನ್ನು ಬಿಟ್ಟರೆ ಅತಿ ಹೆಚ್ಚು ಒಣ ಪ್ರದೇಶ ಇರುವುದು ಕರ್ನಾಟಕದಲ್ಲಿ ಮಾತ್ರ. Desert Developmentd Programme (DDP) ಜಾರಿಯಲ್ಲಿರುವುದು ರಾಜಾಸ್ಥಾನ್ ಮತ್ತು ಕರ್ನಾಟಕ, ಈ ಎರಡೇ ಸ್ಟೇಟ್‌ನಲ್ಲಿ. ಆದರೆ ಕರ್ನಾಟಕಕ್ಕೆ ಬರುತ್ತಿರುವ ಹಣ ಕೇವಲ 114 ಕೋಟಿ ರೂಪಾಯಿಗಳು ಮಾತ್ರ.

ಅಧ್ಯಕ್ಷರು : ತಮ್ಮ ಪ್ರಕಾರ ಏಕೆ ಹೀಗಾಯಿತು? ಅಂದರೆ ಅತ್ಯಂತ ಕಡಿಮೆ ಹಣ Finance Commission ನಿಂದ ನಮ್ಮ ಕರ್ನಾಟಕಕ್ಕೆ allot ಆಗಿದೆ. What is the reason?

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೆ, ನಾನು ಈಗ ಅದನ್ನೇ ಹೇಳಲಿಕ್ಕೆ ಹೊರಟಿದ್ದೇನೆ. ನಮಗೆ ಅತ್ಯಂತ ಕಡಿಮೆ ಹಣ ಬರುತ್ತಿದೆ. ಇದಕ್ಕೆ ಕಾರಣ ಏನೆಂದರೆ, ಕಳೆದ 10-11ನೇ Finance Commission ಪ್ರಾರಂಭವಾದಂತಹ ಸಂದರ್ಭದಲ್ಲಿ ಸರಿಯಾದಂತಹ ಮಾಹಿತಿಯನ್ನು ನಮ್ಮ ರಾಜ್ಯ ಸರ್ಕಾರ ನೀಡಿಲ್ಲ ಎನ್ನುವಂತಹ ಭಾವನೆಯನ್ನು ಇಲ್ಲಿ indirect ಆಗಿ ವ್ಯಕ್ತಪಡಿಸಿದ್ದಾರೆ. ಎಲ್ಲಾ ರಾಜ್ಯಗಳೂ ಕೂಡ ನಮಗೆ ಇನ್ನೂ ಹೆಚ್ಚಿನ ಹಣವನ್ನು ಕೊಡಬೇಕೆಂದು appeal ಮಾಡಿದ್ದಾರೆ. ಇದರಲ್ಲಿ ಎಲ್ಲಾ ರಾಜ್ಯಗಳ ಹೆಸರು ಇದೆ. West Bengal, Kerala, Andhra Pradesh ಮುಂತಾದ ಎಲ್ಲಾ ರಾಜ್ಯದವರೂ ಹೇಳಿದ್ದಾರೆ. ಆದರೆ ಕರ್ನಾಟಕ ಇದರ ಬಗ್ಗೆ ಯಾವುದೇ ಒಂದು ಮಾತನ್ನು ಹೇಳದಿರುವುದರಿಂದ ಹಲವಾರು ದಶಕಗಳಿಂದ, ರಾಜ್ಯಕ್ಕೆ ಅನ್ಯಾಯವಾಗಿದೆ. ಇದು ಕೇವಲ ಆ ದಿನ, ಈ ದಿನ ಎಂದಲ್ಲ, ಹಿಂದೆ ಮಾನ್ಯ ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲೂ ಕೂಡ ಕೇಂದ್ರದಿಂದ ಅನ್ಯಾಯವಾಯಿತು. ಮಾನ್ಯ ಜೆ.ಹೆಚ್. ಪಟೇಲರು ಇದ್ದಾಗಲೂ ಆಯಿತು. ನಾನು ಯಾವುದೇ ರಾಜಕೀಯವನ್ನು ಇಲ್ಲಿ mix ಮಾಡುತ್ತಿಲ್ಲ. ಮಾನ್ಯ ವಾಜಪೇಯಿಯವರ ಸರ್ಕಾರ ಇದ್ದಾಗಲೂ ನಮಗೆ ಇದರಲ್ಲಿ ನ್ಯಾಯ ಸಿಗಲಿಲ್ಲ. ಇದಕ್ಕೆ ಕಾರಣ, ಕರ್ನಾಟಕಕ್ಕೆ ಒಟ್ಟಾರೆ ಹೆಚ್ಚು ಅನ್ಯಾಯ ಹಲವಾರು ಕಾರಣಕ್ಕಾಗಿ ಆಗಿದೆ. ಇದಕ್ಕೆ ಕಾರಣ, ರಾಜ್ಯ ಸರ್ಕಾರ ಸರಿಯಾದಂತಹ ಮಾಹಿತಿಯನ್ನು ನೀಡಲಿಲ್ಲ ಮತ್ತು ಅವರನ್ನು convince ಮಾಡಲಿಲ್ಲ. ಹೀಗಾಗಿ ನಮಗೆ ಬಹಳ ತೊಂದರೆಯಾಯಿತು. ಎರಡನೆಯದಾಗಿ, ನಾನು ಈಗ NCCF ಬಗ್ಗೆ ಬರುತ್ತೇನೆ. ಕಾಲ ಸ್ವಲ್ಪ ಕಡಿಮೆ ಇರುವುದರಿಂದ ನಾನು ಅಷ್ಟರಲ್ಲೇ ಮುಗಿಸುತ್ತೇನೆ. NCCF, ರಾಷ್ಟ್ರೀಯ ವಿಕೋಪ ಸಂಚಿತ ನಿಧಿ, ಇದು ಹೇಗೆ fix ಮಾಡುತ್ತಾರೆ ಎಂದರೆ, ಈ ನಿಧಿ ಪ್ರವಾಹ ಮತ್ತು ಬರ, ಈಗ fire ಅನ್ನೂ ಕೂಡ ಸೇರಿಸಿದ್ದಾರೆ. ಕಪ್ಪತ ಗುಡ್ಡಕ್ಕೆ ಮೊನ್ನೆ ಬೆಂಕಿ ಬಿತ್ತಲ್ಲಾ, ಇನ್ನು ಮೇಲೆ ಅದಕ್ಕೆ ಹಣ ಕೊಡುತ್ತಾರೆ, ರಾಜ್ಯ ಸರ್ಕಾರದವರು ಕೇಳಬೇಕಾಗುತ್ತದೆ. ಕೇವಲ ಪ್ರವಾಹ ಮತ್ತು ಬರ ಇದಕ್ಕಷ್ಟೇ ಅಲ್ಲ. ಇನ್ನು ಮೇಲೆ ಬೆಂಕಿ ಅನಾಹುತಕ್ಕೂ ಕೊಡುತ್ತಾರೆ. ಭೂಕಂಪಕ್ಕೆ ಈಗಾಗಲೇ ಕೊಟ್ಟಾಗಿದೆ, ಅದಕ್ಕೆ ರಾಜ್ಯ

ಸರ್ಕಾರ ಕೇಳಬೇಕಾಗುತ್ತದೆ. ಆದರೆ ರಾಜ್ಯ ಸರ್ಕಾರ ಇವತ್ತಿನವರೆಗೂ ಕೇಳಿಲ್ಲ. Fireಗೂ ಈಗ ಕೊಡುತ್ತಿದ್ದಾರೆ. Fireಗೂ ಕೊಡಿ ಎಂದು ರಾಜ್ಯ ಸರ್ಕಾರ ಕೇಳಬೇಕಾಗಿತ್ತು. ಮಾನ್ಯ ಜಗದೀಶ್ ಶೆಟ್ಟರ್‌ರವರೆ, ನಾನು ಹೀಗೆ ಹೇಳುತ್ತೇನೆ ಎಂದು ದಯಮಾಡಿ ಬೇಜಾರು ಮಾಡಿಕೊಳ್ಳಬೇಡಿ, ಪ್ರಥಮ ಬಾರಿಗೆ ಮಾನ್ಯ ಧರ್ಮಸಿಂಗ್‌ರವರ Government ಇದ್ದಾಗ NCCF ನಿಂದ ರಾಜ್ಯಕ್ಕೆ ಹಣ ಸಿಕ್ಕಿತು. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, NCCF ನಿಂದ 2001–02–03 ಮತ್ತು 04ರಲ್ಲಿ ರಾಜ್ಯ ಸರ್ಕಾರಕ್ಕೆ ಹಣ ಕೊಟ್ಟಿರಲಿಲ್ಲ. ಅದಕ್ಕೆ ಇಲ್ಲಿ ನನ್ನ ಹತ್ತಿರ document ಇದೆ. ಕೇಂದ್ರ ಸರ್ಕಾರ ಯಾವ್ಯಾವ ರಾಜ್ಯಗಳಿಗೆ NCCFನಿಂದ 2000–2005ರವರೆಗೆ, ಎಷ್ಟು release ಮಾಡಿದೆ ಎಂಬ ಮಾಹಿತಿ ನನ್ನ ಬಳಿ ಇದೆ. ಬೇರೆ ಬೇರೆ ಎಲ್ಲಾ ರಾಜ್ಯಗಳಿಗೂ ಹಣವನ್ನು release ಮಾಡಿದ್ದಾರೆ. ಆದರೆ ಕರ್ನಾಟಕಕ್ಕೆ ಮಾತ್ರ ರಿಲೀಸ್ ಮಾಡಿಲ್ಲ. ಪ್ರಥಮ ಬಾರಿಗೆ NCCF ನಿಂದ ಸುಮಾರು 358 ಕೋಟಿ ರೂಪಾಯಿಗಳನ್ನು ಕೃಷ್ಣಾ ನದಿ ಮತ್ತು ಬೇರೆ ಬೇರೆ ನದಿಗಳಲ್ಲಿ ಪ್ರವಾಹ ಬಂದಂತಹ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಕೇಂದ್ರ ವಿಕೋಪ ನಿಧಿಯಿಂದ ಬಿಡುಗಡೆ ಮಾಡಿತು. ಆದರೆ ಉತ್ತರದಲ್ಲಿ ತಾವು ಹೇಳಬೇಕಾಗುತ್ತದೆ. ಕೇಂದ್ರ ಸರ್ಕಾರ NCCFನಿಂದ ಬಿಡುಗಡೆ ಮಾಡಿದಂತಹ 358.85 ಕೋಟಿ ರೂಪಾಯಿಗಳಲ್ಲಿ 158 ಕೋಟಿ ರೂಪಾಯಿಗಳನ್ನು ವಾಪಸ್ ತೆಗೆದುಕೊಂಡಿದೆ. ಇವತ್ತು ಮಾನ್ಯ ಮುಖ್ಯಮಂತ್ರಿಗಳು ಮತ್ತು ತಾವು ಕೇಂದ್ರ ಸರ್ಕಾರದ ಮನವೊಲಿಸಿ, 158 ಕೋಟಿ ರೂಪಾಯಿಗಳನ್ನು ರಾಜ್ಯ ಸರ್ಕಾರಕ್ಕೆ ವಾಪಸ್ ತರಬೇಕಾಗುತ್ತದೆ. ಇಲ್ಲದಿದ್ದರೆ 158 ಕೋಟಿ ರೂಪಾಯಿಗಳು ನಮಗೆ loss ಆಗುತ್ತದೆ. ಅದರ ಬಗ್ಗೆ ತೀವ್ರವಾದಂತಹ ವಿಚಾರವನ್ನು ತಾವು ತೆಗೆದುಕೊಳ್ಳಬೇಕು. ಸಾಧ್ಯವಾದರೆ ಇದರ ಬಗ್ಗೆ ಒಂದು ನಿಯೋಗವನ್ನು ನೀವು ಕರೆದುಕೊಂಡು ಹೋಗಬೇಕಾಗುತ್ತದೆ. ಏಕೆಂದರೆ, NCCF ಒಂದೇ ಅಲ್ಲ, CRF ನಿಂದ ಪ್ರತಿ ವರ್ಷ definite ಆಗಿ ಏನೊಂದು ಹಣ ಬರುತ್ತಿತ್ತೋ, ಅದರಲ್ಲಿ ಎಷ್ಟು ಕಡಿಮೆಯಾಗಿದೆ ಎನ್ನುವಂತಹ ವಿಚಾರವನ್ನು ನಾನು ಈಗಾಗಲೇ ಹೇಳಿದ್ದೇನೆ. CRF ನಲ್ಲಿ 75% ಕೇಂದ್ರ ಸರ್ಕಾರ ಕೊಡುತ್ತದೆ, 25% ನೀವು ಕೊಡುತ್ತೀರಿ. ಅದು ಪ್ರವಾಹ ಇರಲಿ, ಬರ ಬರಲಿ, ಬರ ಇಲ್ಲದಿರಲಿ, ಯಾವುದೇ ಇಲ್ಲದಿದ್ದರೂ ಕೂಡ 12ನೇ ಹಣಕಾಸಿನ ಆಯೋಗದ ಶಿಫಾರಸ್ಸಿನ ಪ್ರಕಾರ automatic ಆಗಿ ನಿಮಗೆ ಹಣ ಬರುತ್ತದೆ. ಅದರಲ್ಲಿ ಯಾವ್ಯಾವ ರೀತಿಯಲ್ಲಿ ಅನ್ಯಾಯವಾಯಿತು ಎಂಬುದರ ಬಗ್ಗೆ ನಾನು ಮೊದಲೇ ವಿವರಣೆ ಕೊಟ್ಟಿದ್ದೇನೆ. ಅದನ್ನೂ ಕೂಡ ನೀವು ಸರಿಯಾದಂತಹ ಮಾಹಿತಿಯನ್ನು ಕೊಟ್ಟು, ಕೇಂದ್ರ ಸರ್ಕಾರವನ್ನು ಮನವೊಲಿಸಿ, ತಿಳಿಸಿ, ಹೆಚ್ಚಿನ ಹಣವನ್ನು ತೆಗೆದುಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ಇದರಿಂದ ಪ್ರತಿ ವರ್ಷ CRF ನಲ್ಲೇನು 114 ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದಾರೋ, ನನಗೆ ಲಭ್ಯವಿರುವ ಮಾಹಿತಿಯ ಪ್ರಕಾರ, ಭೌಗೋಳಿಕ ಕ್ಷೇತ್ರ ಮತ್ತು ಜನಸಂಖ್ಯೆ, ಕೂಲಿಕಾರರ ಸಂಖ್ಯೆ, ನಮ್ಮಲ್ಲಿರುವಂತಹ ನೀರಾವರಿ,

ಮಳೆಯ ಪ್ರಮಾಣ, ಇದೆಲ್ಲವನ್ನೂ ಸೇರಿಸಿದರೆ ಪ್ರತಿ ವರ್ಷ ನಮಗೆ 350 ಕೋಟಿ ರೂಪಾಯಿಗಳು ಬರಬೇಕಾಗುತ್ತದೆ. ಅಂದರೆ we are losing almost 210 Crores every year. ಸರಿಯಾದಂತಹ ಮಾಹಿತಿ ಕೊಡದಿರುವುದರಿಂದ, ನಮಗೆ ಇಷ್ಟು ನಷ್ಟವಾಗುತ್ತಿದೆ. ಅದಕ್ಕಾಗಿ CRF ನಿಂದ ರಾಜ್ಯಕ್ಕೆ ಹೆಚ್ಚು ಹಣ ಕೊಡುವಂತೆ ಕೇಂದ್ರ ಸರ್ಕಾರದವರ ಮನವೊಲಿಸಬೇಕು. ಎರಡನೆಯದಾಗಿ, NCCFನಿಂದ ಮಾನ್ಯ ಧರ್ಮಸಿಂಗ್‌ರವರ ಸರ್ಕಾರ ಇದ್ದಾಗ, 358 ಕೋಟಿ ರೂಪಾಯಿಗಳಲ್ಲಿ 158 ಕೋಟಿ ರೂಪಾಯಿಗಳನ್ನೇನು withdraw ಮಾಡಿದ್ದಾರೋ, ಅದರ ಬಗ್ಗೆ ಹೇಳಬೇಕು. ಅದನ್ನು ವಾಪಸ್ ತರಿಸಿಕೊಳ್ಳಲಿಕ್ಕೆ ಏನೇನು ಕ್ರಮವನ್ನು ಈ ಸರ್ಕಾರ ತೆಗೆದುಕೊಳ್ಳುತ್ತದೆ ಎಂಬ ಮಾತನ್ನು ಹೇಳಬೇಕೆಂದು ಈ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಅಧ್ಯಕ್ಷರೆ, ಒಳ್ಳೆಯ ವಿಷಯವೊಂದನ್ನು ಮಾನ್ಯ ರಾಯರೆಡ್ಡಿಯವರು ಪ್ರಸ್ತಾಪ ಮಾಡಿದ್ದಾರೆ. ಈ Calamity Relief Fund ಮೊದಲಿನಿಂದಲೂ ನಿರ್ದಿಷ್ಟವಾಗಿ ಕೊಡುತ್ತಿದ್ದಂತಹ fund ಏನಲ್ಲ. 1995–96 ಇರಬಹುದು, ಬಹುಶಃ ಅಲ್ಲಿಯವರೆಗೆ discretion ನಲ್ಲಿ ಇರುತ್ತಿತ್ತು ಮತ್ತು Plan advance ಆಗಿ ಕೊಡುತ್ತಿದ್ದರು. ನಂತರ permanent ಆಗಿ ಒಂದು fund ಅನ್ನು ವಾರ್ಷಿಕವಾಗಿ ರಾಜ್ಯಗಳಿಗೆ ಹಂಚಬೇಕು. ಅದರ ಕೆಲವು ಭಾಗವನ್ನು ಕೇಂದ್ರ ಸರ್ಕಾರದಲ್ಲೇ ಇಟ್ಟುಕೊಂಡು ದುರಂತಗಳು ಸಂಭವಿಸಿದಾಗ release ಮಾಡಬೇಕು ಎಂಬ ಒಂದು decision ಅನ್ನು ತೆಗೆದುಕೊಂಡರು. ರಾಜ್ಯಗಳಿಗೆ ಈ funds ಕೊಡಬೇಕು ಎಂದು ನಿರ್ಧಾರ ತೆಗೆದುಕೊಂಡ ದಿವಸ, ಅದರ ಹಿಂದಿನ ಹತ್ತು ವರ್ಷಗಳ utilization ಅನ್ನು ಆಧಾರವಾಗಿ ಇಟ್ಟುಕೊಂಡರು. ಹಿಂದೆ ಹತ್ತು ವರ್ಷಗಳಿಂದ ಯಾರ್ಯಾರು ಯಾವ ಮಟ್ಟದಲ್ಲಿ ಆ fund ಅನ್ನು ಬಳಸಿದ್ದಾರೆ ಎಂದು ಆಧಾರವಾಗಿ ಇಟ್ಟುಕೊಂಡರು. ಈ fundನಲ್ಲಿ ಒಂದು condition ಇರುತ್ತಿತ್ತು. 75% ಅವರು ಕೊಡುತ್ತಿದ್ದರು, 25% ನಾವು ಭರಿಸಿ ಅದನ್ನು ಖರ್ಚು ಮಾಡಬೇಕಾಗಿತ್ತು. ವರ್ಷಕ್ಕೆ ಎರಡು ಸಲ ಕೇಂದ್ರ ಸರ್ಕಾರ ಈ fund ಹಣವನ್ನು ತುಂಬುತ್ತಿತ್ತು. ಒಂದು ಸಲ ತುಂಬಿ, ಇನ್ನೊಂದು ಸಲ ನಾವು ಹಣ release ಮಾಡುವಂತೆ ಕೇಳಬೇಕಾದರೆ, Utilization Certificate ಕಡ್ಡಾಯ ಇತ್ತು. ಯಾವ ಕಾರಣಕ್ಕಾಗಿ ನಾವು fund ಅನ್ನು ಬಳಸಬೇಕಾಗಿತ್ತೋ, ಆ ಕಾರಣಕ್ಕೆ ಬಳಸಿದ್ದೇವೋ, ಇಲ್ಲವೋ ಎಂಬುದನ್ನು convince ಮಾಡಬೇಕಾಗುತ್ತಿತ್ತು. ಆಕಸ್ಮಾತ್ ಎಲ್ಲಿಯಾದರೂ convince ಮಾಡಲು ಸಾಧ್ಯವಾಗದಿದ್ದರೆ, ಮತ್ತೆ release ಮಾಡುವ ಹಣದಲ್ಲಿ ನಮಗೆ ಕೊರತೆ ಉಂಟಾಗುತ್ತಿತ್ತು. ಹಾಗಾಗಿ ಎಲ್ಲೋ ಒಂದು ಕಡೆ ತಪ್ಪಾಗಿ, ನಾವು ಆ fund ಅನ್ನು ಆ ದಶಕದಲ್ಲಿ ಯಾವ ಮಟ್ಟದಲ್ಲಿ ಬಳಸಬೇಕಾಗಿತ್ತೋ, ಆ ಮಟ್ಟದಲ್ಲಿ ಸರಿಯಾಗಿ ಬಳಸಲಿಕ್ಕೆ ಆಗಲಿಲ್ಲವೆನಿಸುತ್ತದೆ. ನಂತರ ಏನಾಯಿತು ಎಂದರೆ ಬಹುಶಃ ನನ್ನ ತಿಳುವಳಿಕೆ ಪ್ರಕಾರ, ಸನ್ಮಾನ್ಯ ದೇವೇಗೌಡರು ಅಲ್ಲಿಗೆ ಹೋದ ಮೇಲೆ, ವರ್ಷಕ್ಕೆ ಇಷ್ಟು ಎಂದು ನಿಗದಿ ಮಾಡುವಂತಹ ಕಾಲ ಬಂದಿತು.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ನರಸಿಂಹರಾವ್‌ರವರ ಕಾಲದಲ್ಲಿ ಆ ರೀತಿಯಾಯಿತು.

ಶ್ರೀ ಜೆ.ಸಿ. ಮಾಧುಸ್ವಾಮಿ : ಆಯಿತು. ಮಾನ್ಯ ನರಸಿಂಹರಾವ್‌ರವರ ಕಾಲದಲ್ಲಿ ಆ ಪದ್ಧತಿ ಜಾರಿಗೆ ಬಂತು. ಬಳಕೆ ಮಾಡಿದ್ದನ್ನು ಆಧಾರವಾಗಿಟ್ಟುಕೊಂಡು ಎಲ್ಲಾ ರಾಜ್ಯಗಳಿಗೆ ನಿಗದಿ ಮಾಡಿದಾಗ ನಮಗೆ ನಿಜವಾಗಿಯೂ ಅನ್ಯಾಯವಾಯಿತು. ಮಾನ್ಯ ರಾಯರೆಡ್ಡಿಯವರು ಹೇಳಿದ ಹಾಗೆ, ನಮ್ಮ ಬಡತನ, ನಮ್ಮ ಭೌಗೋಳಿಕ ವಿಸ್ತೀರ್ಣ, ನಮ್ಮಲ್ಲಿ ಸಂಭವಿಸಬಹುದಾದಂತಹ ದುರಂತಗಳನ್ನು ಗಣನೆಗೆ ತೆಗೆದುಕೊಂಡು ಮಾಡಬೇಕಾಗಿತ್ತು. ಕಳೆದ ಹತ್ತು ವರ್ಷಗಳಲ್ಲಿ ಯಾರ್‍ಯಾರು ಎಷ್ಟೆಷ್ಟು ಬಳಸಿದ್ದಾರೆ ಎಂಬ ಒಂದೇ ಒಂದು ಅಂಶದ ಆಧಾರದ ಮೇಲೆ ಅವರು ನಿಗದಿ ಮಾಡಿಬಿಟ್ಟರು. ಅದರ ಉಪಯೋಗವನ್ನೂ ಕೂಡ ನಾವು ಸರಿಯಾಗಿ ಮಾಡಿಕೊಳ್ಳಲಿಲ್ಲ. ನಮ್ಮ State contribution ಅನ್ನು ತುಂಬದೆ, ನಾವು ಅನೇಕ ಸಲ ಆ fundನ use ಮಾಡಿಕೊಳ್ಳಲಿಲ್ಲ. ಎರಡನೆಯದು, ಅವರು ಹೇಳಿದ ಹಾಗೆ ಎನ್‌ಸಿಸಿಎಫ್‌ನಲ್ಲಿ ಅವರೇ ಕೊಡಬೇಕಾದಂತಹ ಫಂಡ್. ನಾವು ಇದಕ್ಕೆ ಮೆಮರಾಂಡಂ ಸಬ್ಮಿಟ್ ಮಾಡಿ ಅರ್ಜಿ ಕೊಟ್ಟು, ನಮಗೆ ದುರಂತ ಸಂಭವಿಸಿದೆ, ನಮಗೆ ತಕ್ಷಣ ಕೊಡಿ ಎಂದು ಹೇಳಬೇಕು. ಇದಕ್ಕೆ ಮೊದಲೇ ಒಂದು ಮಾತು ಹೇಳಬೇಕಾಗುತ್ತದೆ. ಸಿಆರ್‌ಎಫ್‌ನಲ್ಲಿ 25 ಪರ್ಸೆಂಟ್ ಅಡ್ವಾನ್ಸ್ ಕೂಡ ಡ್ರಾ ಮಾಡಲಿಕ್ಕೆ ಅವರು ಅವಕಾಶ ಮಾಡಿ ಕೊಟ್ಟಿದ್ದರು. ನಮಗೆ ಏನಾದರೂ ಕಷ್ಟ ಆದಾಗ ಮುಂದಿನ ವರ್ಷದ ಹಣದಲ್ಲಿ ಅಡ್ವಾನ್ಸ್ ಆಗಿ 25 ಪರ್ಸೆಂಟ್ ಹಣವನ್ನು ತೆಗೆದುಕೊಂಡು ನಾವು ಮಾಡಬಹುದಾಗಿತ್ತು. ಎನ್‌ಸಿಸಿಎಫ್ ಡಿಸ್ಕ್ರಿಷನ್ ಇಟ್ಟುಕೊಂಡರು. ಎನ್‌ಸಿಸಿಎಫ್‌ನಲ್ಲಿ ಏನಾಯಿತು, ನಾವು ನಿರ್ದಿಷ್ಟವಾಗಿ ದುರಂತಗಳು ಸಂಭವಿಸಿದಾಗ ಕೇಂದ್ರಕ್ಕೆ ಮನವಿ ಕೊಡುವುದು, ಅವರು ಅದನ್ನು ನಮಗೆ ಬಿಡುಗಡೆ ಮಾಡುವುದು, ಅದನ್ನು ಮಾನಿಟರ್ ಮಾಡಲಿಕ್ಕೆ ಒಂದು ಕಮಿಟಿ ಮಾಡುವುದು, ಆ ಕಮಿಟಿ ಶಿಫಾರಸ್ಸು ನೋಡುವುದು, ನಾವು ಸ್ಪಷ್ಟವಾಗಿ ಬಳಸಿದ್ದೇವಾ, ಇಲ್ಲವಾ, ನಾವು ಹೇಳಿದಂತಹ ಕಾರಣಕ್ಕೆ ಬಳಸಿದ್ದೇವಾ ಎಂದು ನೋಡುತ್ತಾರೆ. ಬಳಸುವ ಕಾಲದಲ್ಲಿ ಒಂದನ್ನು ಅವರು ಹೇಳುತ್ತಾರೆ, ಕಂಡಿಷನ್ ಏನು ಹೇಳುತ್ತಾರೆ. ಪ್ರವಾಹದಿಂದ ಸೇತುವೆ ಕಿತ್ತು ಹೋಗಿದೆ ಎಂದರೆ, ಸೇತುವೆ ಮಾಡಬೇಕು. ಆ ಸೇತುವೆಯನ್ನು ಪರ್ಮನೆಂಟಾಗಿ ಮಾಡಬೇಕು. ಕಟ್ಟೆ ಹೊಡೆದು ಹೋಗಿದೆ, ನಾಲೆ ಹೊಡೆದು ಹೋಗಿದೆ ಇದೆಲ್ಲಾ ನಾವು ಮಾಡಬಹುದಾಗಿತ್ತು. ಈ ಕಡೆ ಈ ರಾಜ್ಯ ಫೇಲಾಗಿದೆ. ಈ ಕಡೆ ನಾವು ಕನ್‌ವಿನ್ಸ್ ಮಾಡುವುದರಲ್ಲಿ ಫೇಲಾಗಿದ್ದೇವೆ. ಈ ಕಡೆಗೆ ನಾವು ಏನು ಹಣ ತಂದೆವು, ಬಳಕೆಯೂ ಸರಿಯಾಗಿ ಮಾಡಲಾರದೆ, ಯುಟಲೈಸೇಷನ್ ಸರ್ಟಿಫಿಕೇಟ್ ಸರಿಯಾಗಿ ಕೊಡಲಾರದೆ, ಬಹುಶಃ 158 ಕೋಟಿ ರೂಪಾಯಿ ಈ ರಾಜ್ಯದಿಂದ ವಾಪಸ್ ಹೋಗಿದೆ. ಅದು ವಾಪಸ್ ಕೊಡುತ್ತಾರೋ, ಬಿಡುತ್ತಾರೋ, ಈ ಹಂತದಲ್ಲಿ ಚರ್ಚೆ ಆಗುವುದು ನನಗೆ ಗೊತ್ತಿಲ್ಲ,

ನಾವು ಈಗ ಚರ್ಚೆ ಮಾಡಬೇಕಾಗಿರುವುದು, ಸನ್ಮಾನ್ಯ ಮುಖ್ಯಮಂತ್ರಿಗಳೇ ಇದರ ಬಗ್ಗೆ ನಾವು ಎಲ್ಲಾದರೂ ಒಂದು ವಾದವನ್ನು ಆರಂಭ ಮಾಡಬೇಕು. ಕರ್ನಾಟಕಕ್ಕೆ ಅನ್ಯಾಯವಾಗಿದೆ, ಕರ್ನಾಟಕ ಯಾವತ್ತೋ ಒಂದು ಕಾಲದಲ್ಲಿ ಸಮೃದ್ಧಿಯಾಗಿತ್ತು. ಆ 10 ವರ್ಷಗಳಲ್ಲಿ ನಾವು ಚೆನ್ನಾಗಿದ್ದೆವು. ಕರ್ನಾಟಕ ಒಂದು ಕಾಲದಲ್ಲಿ ಚೆನ್ನಾಗಿತ್ತು. ಇತ್ತೀಚಿನ 10–15 ವರ್ಷಗಳಲ್ಲಿ ನಮಗೇ ಬರಗಾಲ ಜಾಸ್ತಿಯಾಗಿದೆ. ನಮಗೆ ಅಂಡರ್ ಗ್ರೌಂಡ್ ವಾಟರ್ ಲೆವಲ್ ಕೆಳಗೆ ಹೋಗಿದೆ. ನಮಗೆ ನಿಗದಿಯಾಗಿ ಬೆಳೆ ಬರದೆ, ಹಸಿರು ಕಡಿಮೆಯಾಗಿ ನಾವು ಮರಳುಗಾಡು ಪ್ರದೇಶ ಆಗುತ್ತಿದ್ದೇವೆ. ಇದೆನ್ನಾಲ್ಲಾ ಕನ್‌ವಿನ್ಸ್ ಮಾಡಿ ಕೋಟಾ ಫಿಕ್ಸ್ ಮಾಡುವುದು ಏನಿದೆ, ಇದು ಈಗ 2010ನೇ ಇಸವಿವರೆಗೆ ಫಿಕ್ಸ್ ಆಗಿ ಬಿಟ್ಟಿದೆ. 2010ನೇ ಇಸವಿವರೆಗೆ ಎಲ್ಲಾ ರಾಜ್ಯಗಳಿಗೂ ಫಂಡ್ ಫಿಕ್ಸ್ ಆಗಿದೆ. ಮಧ್ಯೆ ಎಲ್ಲಾದರೂ ನಾವು ಬಾಯಿ ಹಾಕಿ ಇದನ್ನು ಹೆಚ್ಚು ಮಾಡುವುದಕ್ಕೆ ಒತ್ತಾಯ ತರ ಬೇಕಾಗುತ್ತದೆ. ಆ ದಿಕ್ಕಿನಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಅಧಿಕಾರಿಗಳ ಜೊತೆಯೂ ಚರ್ಚೆ ಮಾಡಬೇಕು. ವಿಧಾನಸೌಧದಲ್ಲಿ ಎಲ್ಲಾ ಪಕ್ಷದವರ ಸಭೆ ಕರೆದು ಹೇಗೆ ಮಾಡಬೇಕೆಂದು ಒಂದು ಕಾರ್ಯಕ್ರಮ ಹಾಕಿಕೊಂಡು ಹೋಗದೇ ಇದ್ದರೆ, ರಾಜ್ಯಕ್ಕೆ ಅನ್ಯಾಯವಾಗುತ್ತದೆ. ಬಹುಶಃ ನಾವು ಚಿಕ್ಕ ರಾಜ್ಯಗಳಿಗಿಂತ ಕಡಿಮೆ ಹಣವನ್ನು ತೆಗೆದುಕೊಳ್ಳುತ್ತಿದ್ದೇವೆ. ನಾವು 600 ಚಿಲ್ಲರೆ ಕೋಟಿ ಹಣ 10 ವರ್ಷಗಳಿಗೆ ತೆಗೆದುಕೊಂಡರೆ, ಐದು ವರ್ಷಗಳಿಗೆ ತೆಗೆದುಕೊಂಡರೆ, ಬೇರೆಯವರು ಸಾವಿರ, 1,500, 1,600 ಕೋಟಿ ರೂಪಾಯಿಗಳನ್ನು ಇವತ್ತು ಸಿಆರ್‌ಎಫ್ ಫಂಡ್‌ನಲ್ಲಿ ಡ್ರಾ ಮಾಡಿಕೊಳ್ಳುವಂತಹ ಪರಿಸ್ಥಿತಿ ನಿರ್ಮಾಣ ಮಾಡಿಕೊಂಡಿದ್ದಾರೆ. ಅದರಲ್ಲಿಯೂ ನಾವು ಮಾತನಾಡಬಾರದು. ಉತ್ತರದ ರಾಜ್ಯಗಳಿಗೆ ಸ್ವರ್ಗ ಆಗಿದೆ. ಕೇಂದ್ರ ಸರ್ಕಾರದಿಂದ ಹಣ ತೆಗೆದುಕೊಂಡು ಹೋಗುವುದು, ಯುಟಲೈಸೇಷನ್ ಸರ್ಟಿಫಿಕೇಟ್ ಕೊಡುವುದು, ಅಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನು ಚೆನ್ನಾಗಿಟ್ಟುಕೊಳ್ಳುವುದು, ಪ್ರತಿ ಹಂತದಲ್ಲಿ ಹಣ ಡ್ರಾ ಮಾಡುವುದು ಅವರಿಗೆ ಕರಗತ ಆಗಿಬಿಟ್ಟಿದೆ. ನಾವು ಎಲ್ಲೋ ಒಂದು ಕಡೆ ವಿಫಲರಾಗಿದ್ದೇವೆ. ಆ ದೋಷವನ್ನು ಸರಿಪಡಿಸಿಕೊಳ್ಳುವುದಕ್ಕೆ ಈಗಿನ ಮುಖ್ಯ ಮಂತ್ರಿಗಳಾದರೂ ಒಂದು ಪ್ರಯತ್ನ ಮಾಡಬೇಕು. ಈ ಫಿಕ್ಸ್ಡ್ ಕೋಟಾ ಏನಿದೆ ಅದನ್ನು ಜಾಸ್ತಿ ಮಾಡಿಕೊಳ್ಳುವುದಕ್ಕೆ ಒಂದು ನಿಯೋಗ ಕರೆದುಕೊಂಡು ಹೋಗುವುದು, ಇಲ್ಲಿ ಒಂದು ಚರ್ಚೆ ಮಾಡುವುದು, ನಾವು ಎಲ್ಲವನ್ನೂ ಅವರಿಗೆ ಎಕ್ಸ್‌ಪ್ಲೇನ್ ಮಾಡಬೇಕಾಗುತ್ತದೆ. ಆ ಕೆಲಸ ತಾವು ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು : ಇನ್ಯಾರಾದರೂ ಮಾತನಾಡುತ್ತಾರಾ?

ಶ್ರೀ ಆರ್. ರೋಷನ್ ಬೇಗ್ : ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಮೇಲೆ ಅಟ್ಯಾಕ್ ಆಗಿದ್ದರ ಬಗ್ಗೆ ಉತ್ತರ ಕೊಡುತ್ತೇನೆಂದು ಹೇಳಿದ್ದರು.

ಅಧ್ಯಕ್ಷರು : ಇವತ್ತು ತಂದಿಲ್ಲ ಅದು, ನಂತರ ತೆಗೆದುಕೊಳ್ಳೋಣ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, 2003ರಲ್ಲಿ ಅಂದಿನ ರಾಜ್ಯ ಸರ್ಕಾರ ನೀಡಿದ ಬೇಡಿಕೆ ಹಾಗೂ ಪ್ರಸ್ತಾವನೆಗಳನ್ನು ಪರಿಗಣಿಸಿ 12ನೇ ಆರ್ಥಿಕ ಆಯೋಗವು 2005–06ರಿಂದ 2010 ರವರೆಗೆ ಕರ್ನಾಟಕಕ್ಕೆ 633 ಕೋಟಿ ಹಣ ಮಂಜೂರು ಮಾಡಿದೆ, 2006–07ಕ್ಕೆ 120.39 ಕೋಟಿ ಹಣ ಸಿಆರ್‌ಎಫ್ ಅಡಿಯಲ್ಲಿ ಲಭ್ಯ ಇದೆ. ನಮ್ಮ ವಾದ ಏನೇ ಇದ್ದರೂ ಅದನ್ನು 13ನೇ ಆರ್ಥಿಕ ಆಯೋಗದ ಮುಂದೆ ಆ ಗೈಡ್‌ಲೈನ್ ಪ್ರಕಾರ 2008–09ರಲ್ಲಿ ಮಂಡಿಸಬೇಕಾಗಿದೆ. ಈ ಮಧ್ಯದಲ್ಲಿ ಸಿಆರ್‌ಎಫ್ ಮತ್ತು ಎನ್‌ಸಿಸಿಎಫ್‌ಗಳನ್ನು ಸಂಪೂರ್ಣವಾಗಿ ಬದಲಾಯಿಸಿ, National Disaster Response Fund and National of Mitigation Fund ಎಂದು ಹೊಸದಾಗಿ ರಚಿಸುವ ಕ್ರಮ ಪ್ರಗತಿಯಲ್ಲಿದೆ. ಎನ್‌ಸಿಸಿಎಫ್‌ನಲ್ಲಿ ನೀಡುವ ಹಣ ಫಿಕ್ಸೆಡ್ ಆಗಿರುವುದಿಲ್ಲ. ಪ್ರಸಂಗಕ್ಕೆ ಸರಿ ಹೊಂದುವಂತೆ ಕೇಂದ್ರ ಸರ್ಕಾರದ ಅಧ್ಯಯನ ತಂಡವು ನೀಡುವ ವರದಿಯಂತೆ ವರ್ಷ ವರ್ಷಕ್ಕೆ ಹೆಚ್ಚು ಕಡಿಮೆ ಹಣ ನೀಡಲಾಗುತ್ತದೆ. 2001ರಿಂದ 2005ರ ಐದು ವರ್ಷದಲ್ಲಿ ನಮಗೆ ಕೇವಲ 200 ಕೋಟಿ ಹಣ ದೊರೆತರೆ, 2005–06ರಲ್ಲಿ ಒಂದೇ ವರ್ಷಕ್ಕೆ 357 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಈ ವಿಷಯದಲ್ಲಿ ತಾವು ಏನು ಚರ್ಚೆ ಮಾಡಿದ್ದೀರಿ...

ಶ್ರೀ ಜೆ.ಸಿ. ಮಾಧುಸ್ವಾಮಿ : ಬೆಳಗಾಂ ಒಂದಕ್ಕೇ 1,500 ಚಿಲ್ಲರೆ ಕೋಟಿ ಕೇಳಿದ್ದಕ್ಕೆ, 300 ಚಿಲ್ಲರೆ ಕೋಟಿ ಕರ್ನಾಟಕಕ್ಕೆ ಬಂದಿದ್ದು. ಇಡೀ ಬೆಳಗಾಂ ಜಿಲ್ಲೆ ಮುಳುಗಿ ಹೋದಂತಹ ಕಾಲ ಅದು. ಅದರಲ್ಲಿ 158 ಕೋಟಿ ರೂಪಾಯಿ ವಾಪಸ್ ಹೋಗಿದೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಈ ವಿಷಯದಲ್ಲಿ ಏನು ಸದನದಲ್ಲಿ ಗಮನ ಸೆಳೆದಿದ್ದೀರಿ, ಒಂದು ಸರ್ವಪಕ್ಷಗಳ ಮುಖಂಡರ ಸಭೆ ಕರೆದು, ಒಂದು ನಿಯೋಗವನ್ನು ತೆಗೆದುಕೊಂಡು ಹೋಗಿ, ನಮಗೆ ಆಗಿರತಕ್ಕಂತಹ ಅನ್ಯಾಯದ ಬಗ್ಗೆ ಕೇಂದ್ರ ಸರ್ಕಾರದ ಗಮನಕ್ಕೆ ತರುವುದರ ಮುಖಾಂತರ ನಾವು ಹೆಚ್ಚಿನ ನಮ್ಮ ಅಗತ್ಯತೆ ಏನಿದೆ ಅದನ್ನು ಅವರ ಮುಂದೆ ಮನವಿ ಮಾಡಿ ಹೆಚ್ಚಿನ ಹಣವನ್ನು ತರತಕ್ಕಂಥದ್ದಕ್ಕೆ ಎಲ್ಲರೂ ಸೇರಿ ಪ್ರಯತ್ನ ಮಾಡೋಣ.

ಶ್ರೀ ಬಸವರಾಜ ರಾಯರೆಡ್ಡಿ : ನಿಮ್ಮ ಉತ್ತರದಲ್ಲಿ ಏನು ಹೇಳಿದಿರಿ. 158 ಕೋಟಿ ರೂಪಾಯಿ ಕೇಂದ್ರ ಸರ್ಕಾರ ವಾಪಸ್ ತೆಗೆದುಕೊಂಡಿದೆ ಎಂದು ಹೇಳಿದಿರಿ. ಅದರ ಬಗ್ಗೆ ತಾವು ಸ್ಪಷ್ಟೀಕರಣ ಕೊಡಬೇಕಾಗಿದೆ. ಏಕೆಂದರೆ, ಮಾನ್ಯ ಧರ್ಮಸಿಂಗ್‌ರವರು ಇದ್ದಂತಹ ಸಂದರ್ಭದಲ್ಲಿ 358 ಕೋಟಿ ಹಣ ಕೊಟ್ಟಿದ್ದಾರೆಂದು ಹೇಳಿದ್ದರು. ಅದರ ಪ್ರಕಾರ ಉತ್ತರದಲ್ಲಿ ಹಾಗೆಯೇ ಇದೆ. 358 ಕೋಟಿ ಕೊಟ್ಟು 158 ಕೋಟಿ ಹಣ ವಾಪಸ್ ತೆಗೆದುಕೊಂಡಿದ್ದಾರೆಂದು ಇದೆ. ಕೇಂದ್ರ ಸರ್ಕಾರ 158 ಕೋಟಿ ಹಣ ವಾಪಸ್ ತೆಗೆದುಕೊಂಡಿದೆಯೇ? ಹಾಗಿದ್ದಲ್ಲಿ ಅದನ್ನು ವಾಪಸ್ ಪಡೆಯುವುದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ?

ಶ್ರೀ ಜಗದೀಶ್ ಶೆಟ್ಟರ್ : ಸನ್ಮಾನ್ಯ ಅಧ್ಯಕ್ಷರೆ, ಈ 158 ಕೋಟಿ ರೂಪಾಯಿ ಹಣವನ್ನು ವಾಪಸ್ ತೆಗೆದುಕೊಂಡರು. ಅಂದಿನ ಮುಖ್ಯ ಮಂತ್ರಿಗಳಾದ ಮಾನ್ಯ ಧರ್ಮಸಿಂಗ್‌ರವರು ಅದರ ಬಗ್ಗೆ ಮತ್ತೆ ಸಾಕಷ್ಟು ಪ್ರಯತ್ನ ಮಾಡಿದರು. ಕೇಂದ್ರ ಸರ್ಕಾರಕ್ಕೂ ಹೋದರು, ಆದರೆ ಹಣ ವಾಪಸ್ ಬರಲಿಲ್ಲ. ಆದರೆ ಮುಂದೆ 15 ದಿವಸ ಅಥವಾ ಒಂದು ತಿಂಗಳಲ್ಲ ಮತ್ತೆ 160 ಕೋಟಿ ರೂಪಾಯಿ ಅಡಿಷನಲ್ ಸ್ಯಾಂಕ್ಷನ್ ಆಯಿತು. ಅದೆಲ್ಲಾ ಸೇರಿ ಈ 358 ಕೋಟಿ ಆಯಿತು. 158 ಕೋಟಿ ಹಣ ವಾಪಸ್ ತೆಗೆದುಕೊಂಡಿದ್ದರು. ಮತ್ತೊಂದು ಬೇರೆ ಇನ್‌ಸ್ಟಾಲ್‌ಮೆಂಟ್‌ನಲ್ಲಿ ಕೊಟ್ಟಿದ್ದಾರೆ. ನಾವು ಡಿಮಾಂಡ್ ಮಾಡಿದ್ದೆವು. ಅದಕ್ಕಾಗಿ ಕೊಟ್ಟಿದ್ದಾರೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : 158 ಕೋಟಿ ವಾಪಸ್ ತೆಗೆದುಕೊಂಡಿದ್ದ ಹಣ ಮತ್ತೆ ಅಂದಿನ ಮುಖ್ಯ ಮಂತ್ರಿಗಳಾದ ಮಾನ್ಯ ಧರ್ಮಸಿಂಗ್‌ರವರು ಹೋಗಿ ರಿಕ್ವೆಸ್ಟ್ ಮಾಡಿದ ಮೇಲೆ ಮತ್ತೆ ಆ ಹಣ ಸಂಪೂರ್ಣ ಬಿಡುಗಡೆ ಮಾಡಿದರು.

ಶ್ರೀ ಬಸವರಾಜ ರಾಯರೆಡ್ಡಿ : ತಾವು ಏನು ಹೇಳಿದಿರಿ, ಇದನ್ನು ಏನಿದ್ದರೂ ಕೂಡ ನಾವು 13ನೇ ಫೈನಾನ್ಸ್ ಕಮಿಷನ್‌ನಲ್ಲಿಯೇ ಸರಿ ಮಾಡಬೇಕೆಂದು ಹೇಳುತ್ತೀರಿ, ದಯಮಾಡಿ ಇದರ ಬಗ್ಗೆ ಗಂಭೀರವಾಗಿ ತಾವು ಗಮನ ಕೊಡಬೇಕಾಗುತ್ತದೆ. ಇದೇನು ಬೈಬಲ್ ಅಲ್ಲ ಅಥವಾ ಖುರಾನ್ ಅಲ್ಲ, ಬದಲಾವಣೆ ಮಾಡುವ ಹಾಗಿಲ್ಲ, ಎಂದೋ ಬರೆದು ಇಟ್ಟು ಬಿಟ್ಟಿದ್ದಾರೆ, ಮುಗಿಯಿತು ಎಂದು ಹೇಳಲು ಆಗುವುದಿಲ್ಲ. 12ನೇ ಹಣಕಾಸಿನ ಆಯೋಗಕ್ಕೆ ಈಗಲೂ ಮನವಿ ಮಾಡಬಹುದು. ಇಲ್ಲದೆ ಇದ್ದರೆ ಐದು ವರ್ಷ ಎಷ್ಟೆಷ್ಟು ಹಣ ಎಂದು ಈಗಾಗಲೇ ಫಿಕ್ಸ್ ಮಾಡಿ ಬಿಟ್ಟಿದ್ದಾರೆ. ನಮಗೆ ಎಷ್ಟು ಹಣವೆಂದು ಫಿಕ್ಸ್ ಮಾಡಿದ್ದಾರೆ. ಅದು ಈ ವರ್ಷದಿಂದಲೇ ಪ್ರಾರಂಭವಾಗುತ್ತದೆ. ಅದನ್ನು ಬದಲಾವಣೆ ಮಾಡಿಸಬೇಕಾಗುತ್ತದೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಅದು ಅಂತಿಮ ಅಲ್ಲವೆಂದು ಹೇಳುತ್ತಿದ್ದೀರಿ, ನಾನು ಈಗಾಗಲೇ ಹೇಳಿದೆ, ಮಾಧುಸ್ವಾಮಿಯವರು "ನಾವೆಲ್ಲಾ ಈ ವಿಷಯದ ಬಗ್ಗೆ ಸಮಗ್ರವಾಗಿ ಮಾಡಿ ಕೇಂದ್ರ ಸರ್ಕಾರಕ್ಕೆ ನಿಯೋಗ ಹೋಗೋಣ" ಎಂದು ಏನು ಹೇಳಿದರು, ನಾವೆಲ್ಲಾ ಒಟ್ಟಾಗಿ ಒಂದು ನಿಯೋಗ ಹೋಗಿ ಹೆಚ್ಚಿನ ಹಣ ತರತಕ್ಕಂಥದ್ದಕ್ಕೆ ಮನವಿ ಮಾಡೋಣ.

ಶ್ರೀ ಹೆಚ್. ಆಂಜನೇಯ : ಮಾನ್ಯ ಅಧ್ಯಕ್ಷರೆ, ರೈತರ ಹುಲ್ಲು ಬಣವಿ, ರಾಗಿ ಬಣವಿ ಎಲ್ಲಾ ಬೆಂಕಿ ಬಿದ್ದು ನಾಶವಾಯಿತು ಎಂದರೆ, ನಮ್ಮ ಕ್ಷೇತ್ರದಲ್ಲಿ ಒಂದು ಪೈಸೆ ಕೊಟ್ಟಿಲ್ಲ. ಮೊನ್ನೆ ತಾನೆ ಲಕ್ಷಾಂತರ ರೂಪಾಯಿಯ ಗೋವಿನ ಜೋಳದ ತೆನೆ ಸುಟ್ಟು ಹೋಗಿದೆ, ಕೊಡುವುದಕ್ಕೆ ಬರುವುದಿಲ್ಲ ಎಂದು ಡಿಸಿಯವರು ಹೇಳುತ್ತಾರೆ. ಪ್ರಾವಿಷನ್ ಇಲ್ಲವೆಂದು ಹೇಳುತ್ತಿದ್ದಾರೆ. ರಾಗಿ ಬಣವಿ ಸುಟ್ಟು ಹೋಗಿವೆ, ಹಣ ಕೊಡಲು ಗೈಡ್‌ಲೈನ್ಸ್ ಇಲ್ಲವೆಂದು ಹೇಳುತ್ತಾರೆ. ನಮ್ಮ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ.

ಶ್ರೀ ಆರ್.ವಿ. ದೇಶಪಾಂಡೆ : ಮೊದಲು ಕೊಡುತ್ತಿದ್ದರು, ಸ್ಟಾಪ್ ಆಗಿದೆ. ರೈತರಿಗೆ ಇದು ದೊಡ್ಡ ಅನಾಹುತ. 365 ದಿನ ಗದ್ದೆಯಲ್ಲಿ ದುಡಿದು, ವರ್ಷದ ಬೆಳೆ ನಾಶವಾದರೆ ಅಥವಾ ಸುಟ್ಟು ಹೋದರೆ, ಯಾವ ದುಡ್ಡೂ ಅವರಿಗೆ ಕೊಡಲಿಲ್ಲ ಎಂದರೆ ಹೇಗಾಗುತ್ತದೆ? ಕಾಂಪೆನ್‌ಸೇಷನ್ ಸಿಗುವುದಿಲ್ಲ. ಇನ್‌ಶ್ಯೂರೆನ್ಸ್ ಸಿಗುವುದಿಲ್ಲ. ಹಾಗಾಗಿ ಕಾಂಪೆನ್‌ಸೇಷನ್ ಸಿಗುವುದು ಮುಂಚೆ ಏನಿತ್ತು ಅದರ ಪ್ರಮಾಣವೂ ಹೆಚ್ಚಾಗಬೇಕು ಅದು ಕೊಡುವ ವ್ಯವಸ್ಥೆಯೂ ಆಗಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಬವಣೆ ಸುಟ್ಟು ಹೋದರೆ ಈಗ ಪ್ರಾವಿಷನ್ ಇಲ್ಲವೆಂದು ಹೇಳಿದ್ದಾರೆ. ಕೊಟ್ಟಿಗೆ ಮನೆಗಳು ಸುಟ್ಟು ಹೋದರೆ ಪ್ರಾವಿಷನ್ ಇಲ್ಲವೆಂದು ಹೇಳುತ್ತಾರೆ. ಜಾನುವಾರುಗಳ ಹಾನಿ ಆದರೆ ಕೊಡುತ್ತಾರೆ, ಮನುಷ್ಯರ ಪ್ರಾಣ ಹಾನಿ ಆದರೆ ಕೊಡುವುದಿಲ್ಲ. ಅದನ್ನು ಏನಾದರೂ ಮಾಡಿ ರಿಪೈವ್ ಮಾಡಬೇಕು, ಇಲ್ಲದಿದ್ದರೆ ರೈತರಿಗೆ ಬಹಳ ಕಷ್ಟವಾಗುತ್ತದೆ.

ಶ್ರೀ ಹೆಚ್. ಆಂಜನೇಯ : ಇದರ ಬಗ್ಗೆ ಕೂಡಲೇ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಮಾರ್ಗಸೂಚಿಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಜಗದೀಶ್ ಶೆಟ್ಟರ್‌ರವರೇ ಅಂತಿಮವಾಗಿ ಈ ಬಗ್ಗೆ ಹೇಳಿಬಿಡಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ : ನ್ಯಾಚುರಲ್ ಕೆಲಾಮಿಟಿ ಫಂಡ್‌ನಲ್ಲಿ ಗೈಡ್‌ಲೈನ್ಸ್ ಮೇಲೆ ಒಂದೆರಡು ಸೇರಿಸಿದರೆ ಆಯಿತು. ಇದಕ್ಕೇನು ಕಾನೂನು ಬೇಕಾಗಿಲ್ಲ. ಈಗಾಗಲೇ ಎಕ್ಸಿಕ್ಯುಟೀವ್ ಆರ್ಡರ್ ಇದೆ. ಗವರ್ನಮೆಂಟ್ ರಿಟನ್ ಗೈಡ್‌ಲೈನ್ಸ್ ಇದೆ. ಭಾರತ ಸರ್ಕಾರದವರು ಒಂದೊಂದು ಸಲ ಯಾವ ಬಣವೆಯನ್ನು ನೋಡುವುದಿಲ್ಲ. ಊರು ನೋಡುವುದಿಲ್ಲ. ಅಲ್ಲಿ ಕುಳಿತು ಏನು ಬರೆದರೋ ಅದಕ್ಕೆ ಎಸ್ ಅನ್ನುತ್ತಾರೆ. ಅದಕ್ಕೆ ಅವರ ಗೈಡ್‌ಲೈನ್ಸ್‌ನಲ್ಲಿ ಇಲ್ಲವೆಂದು ಹೇಳಿ ನಮ್ಮವರು ಕೂಡ ಅದಕ್ಕೆ ರಿಸ್ಟ್ರಿಕ್ಷನ್‌ನ್ನು ಹಾಕಿದ್ದಾರೆ. ಅವರು ಹಣವನ್ನು ಈ ಕಂಡಿಷನ್ ಮೇಲೆ ಕೊಡುತ್ತಾರೆ. ಅದಕ್ಕಾಗಿ ನಾವೆಲ್ಲಿಂದ ಕೊಡೋಣವೆಂದು ರಾಜ್ಯ ಸರ್ಕಾರದ ವಾದ. ಅದಕ್ಕಾಗಿ ನಾವು ಏನು ಮಾಡಬೇಕೆಂದರೆ, ಅಂತಹದರಲ್ಲಿ ನಮ್ಮ ಭಾಗದ ಹಣ ಏನು 25 ಪರ್ಸೆಂಟ್ ಇದೆ. ಅದರಲ್ಲಿ ಬೇಕಾದರೆ ಇನ್ನೊಂದು 2–3 ಪರ್ಸೆಂಟ್ ಹೆಚ್ಚಿಗೆ ಹಣವನ್ನು ಬಿಡುಗಡೆ ಮಾಡಬೇಕು. ತಾವು ಇಂತಹ ಕಷ್ಟ ಕಾಲದಲ್ಲಿ ಅವರಿಗೆ ಸ್ವಲ್ಪ ಸಹಾಯ ಮಾಡಬೇಕು. ಅದು ಹೆಚ್ಚಿಗೆ ಆಗುವುದಿಲ್ಲ. ಎಲ್ಲಾ ಸೇರಿದರೆ ಸುಮಾರು 1 ರಿಂದ 2 ಕೋಟಿ ರೂಪಾಯಿಗಳು ಒಂದು ವರ್ಷಕ್ಕೆ ಮೀರುವುದಿಲ್ಲ. ಅದಕ್ಕಾಗಿ ತಾವು ಅದನ್ನು ನೋಡಬೇಕು.

ಶ್ರೀ ಆರ್.ವಿ. ದೇಶಪಾಂಡೆ : ಈ ಪ್ರಶ್ನೆಯನ್ನು ನಾವು ವಿಚಾರ ಮಾಡುವಾಗ ಕೇಂದ್ರ ಸರ್ಕಾರಕ್ಕೂ ಹೇಳಿದ್ದೇವೆ. ರಾಜ್ಯ ಸರ್ಕಾರ ನಮ್ಮ ಜನರ ಬಗ್ಗೆ ಚಿಂತನೆಯನ್ನು ಮಾಡಬೇಕಲ್ಲಾ? ಹಾಗಾಗಿ ಮಾನ್ಯ ಸದಸ್ಯರಾದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದ ಹಾಗೆ ಕೇಂದ್ರ ಸರ್ಕಾರದ ಗೈಡ್‌ಲೈನ್ಸ್ ನಿಜವಾದರೂ ಸಹ ಇಂತಹ ಅನಾಹುತಗಳು ಆದಾಗ ನ್ಯಾಚರಲ್ ಕೆಲಾಮಿಟಿ ಆದಾಗ ರೈತರಿಗಾಗಲಿ, ದನಕರುಗಳಿಗಾಗಲಿ, ಇದಕ್ಕೆ

ತಾವು ಒಂದು ಕ್ರಮವನ್ನು ತೆಗೆದುಕೊಳ್ಳಬೇಕು. ಇನ್ನು ಎರಡನೆಯದಾಗಿ ಹೇಳುವುದಾದರೆ, ನಮ್ಮ ಮಲೆನಾಡು ಜಿಲ್ಲೆಯಲ್ಲಿ ಆನೆಗಳ ಕಾಟ ಬಹಳವಾಗಿದೆ. ಭತ್ತದ ಗದ್ದೆಗೆ ನುಗ್ಗಿ ತಿಂದುಕೊಂಡು ಹೋಗುತ್ತವೆ. ಕಬ್ಬನ್ನು ತಿಂದು ಹೋಗುತ್ತವೆ. ಅವರಿಗೆ ಕಾಂಪನ್‌ಸೇಷನ್ ಏನು ಕೊಡುತ್ತೇವೆ. 10 ಸಾವಿರ ರೂಪಾಯಿಗಳ ಹಾನಿಯಾದರೆ 500 ರೂಪಾಯಿಗಳ ಕಾಂಪನ್‌ಸೇಷನ್ ಕೊಡುತ್ತೇವೆ. ಅದು ಬರುವುದಕ್ಕೆ ಸುಮಾರು ಎರಡು ವರ್ಷಗಳಾಗುತ್ತದೆ. ಹಾಗಾಗಿ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ವರಿಗೂ ಸಹ ಸಾಕಷ್ಟು ಹಣವನ್ನು ರಿಲೀಸ್ ಮಾಡಿ ತಕ್ಷಣ ಕಾಂಪನ್‌ಸೇಷನ್‌ನ್ನು ಕೊಡಬೇಕು. ಕಾಂಪನ್‌ಸೇಷನ್ ಪ್ರಮಾಣವನ್ನು ಸಾಕಷ್ಟು ಹೆಚ್ಚಿಸಬೇಕು. ರೈತರು ಬಹಳ ಕಷ್ಟದಲ್ಲಿದ್ದಾರೆ. ಅದನ್ನು ಸಹ ತಾವು ಗಮನಿಸಬೇಕೆಂದು ನಾನು ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಒಂದು ಬೆಳಗಾಂನಲ್ಲಿ ಆದಂತಹ ಘಟನೆಯ ಸಂದರ್ಭದಲ್ಲಿ ನಾನು ಕೃಷಿ ಇಲಾಖೆಯ ಅಧಿಕಾರಿಗಳಿಗೆ ಒಂದು ಸೂಚನೆಯನ್ನು ಕೊಟ್ಟಿದ್ದೇನೆ. ಕಳೆದ ನಾಲ್ಕೈದು ವರ್ಷಗಳಲ್ಲಿ ಏನು ಆವರೇಜ್ ಈ ರೀತಿಯ ಘಟನೆಗಳಿಂದ ನಮ್ಮ ರೈತರಿಗೆ ಆಗಿರುವಂತಹ ನಷ್ಟದ ಏನು ವೆಚ್ಚಗಳಿದೆ, ಅದನ್ನು ಒಂದು ವಿವರವಾದ ವರದಿಯನ್ನು ಕೊಡುವುದಕ್ಕೆ ಹೇಳಿದ್ದೇನೆ. ಆ ಒಂದು ಗೈಡ್‌ಲೈನ್ ಇಟ್ಟುಕೊಂಡು ಸನ್ಮಾನ್ಯ ಖರ್ಗೆಯವರು ಹೇಳಿದ ಹಾಗೆ ರಾಜ್ಯ ಸರ್ಕಾರವೆ, ಇವತ್ತು ಅಂತಹ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಇದಕ್ಕೆ ಕೊಡುವುದಕ್ಕೆ ಒಪ್ಪಿಗೆ ಇಲ್ಲವೆಂದು ಹೇಳಿ, ನಾವು ನಮ್ಮ ಜವಾಬ್ದಾರಿಯನ್ನು ಇವತ್ತು ನಾವು ನುಣುಚಿಕೊಳ್ಳುವುದಕ್ಕಿಂತ ಹೆಚ್ಚಾಗಿ, ಇಂತಹ ಸಂದರ್ಭದಲ್ಲಿ ರಾಜ್ಯ ಸರ್ಕಾರವೇ ಅಂತಹ ಕುಟುಂಬದ ರೈತರುಗಳಿಗೆ ಅನುಕೂಲ ಮಾಡಿಕೊಡುವುದಕ್ಕೆ ಒಂದು ನೀತಿಯನ್ನು ಮುಂದಿನ ದಿನಗಳಲ್ಲಿ ಪ್ರಕಟಪಡಿಸುವುದಕ್ಕೆ ಹಾಗೂ ಆ ಹಣವನ್ನು ಯಾವ ರೀತಿಯಾಗಿ ಕೊಡಬೇಕು ಎನ್ನುವುದರ ಬಗ್ಗೆ ತೀರ್ಮಾನ ಮಾಡಲಿಕ್ಕೆ ಬಯಸುತ್ತೇನೆ ಹಾಗೂ ಅದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು : ಈಗ ರಾಜೇಂದ್ರನ್‌ರವರೆ, ತಾವು 10 ನಿಮಿಷದೊಳಗಡೆ ಮಾತನಾಡಿ ಮುಗಿಸಿ.

(ಆ) ಇಂಡಿಯನ್ ಇನ್ಸ್‌ಟ್ಯೂಟ್ ಆಫ್ ಸೈನ್ಸ್ ಸಭಾಂಗಣದಲ್ಲಿ **ಭಯೋತ್ಪದಕರು ವಿಜ್ಞಾನಿಯವರನ್ನು ಗುಂಡಿಟ್ಟು ಕೊಂದಿರುವ** ಬಗ್ಗೆ.

ಶ್ರೀ ಎಸ್. ರಾಜೇಂದ್ರನ್ (ಕೆಜಿಎಫ್) : ಸನ್ಮಾನ್ಯ ಸಭಾಧ್ಯಕ್ಷರೆ, ತಾವು ಅವತ್ತು ಭಾಷಣ ಮಾಡುವಂತಹ ಟೈಮ್‌ನಲ್ಲಿ ತಮಗೆ ಗೊತ್ತಿದೆ, ಒಂದು ಸೈಂಟಿಸ್ಟ್ ಅವರಿಗೆ ಫೈರಿಂಗ್ ಮಾಡಿ ಅದರ ಬಗ್ಗೆ ನಮಗೆ ಇನ್ನೂ ಮಾಹಿತಿ ಗೊತ್ತಿಲ್ಲ. ಅದರ ಬಗ್ಗೆ ಬಹಳ ಸೂಕ್ಷ್ಮವಾಗಿ ಕೇಂದ್ರ ಮಂತ್ರಿಗಳು ಹೇಳಿದ್ದಾರೆ. ಜೊತೆಗೆ ಇಲ್ಲಿ ನಮ್ಮ ವಿಧಾನಸೌಧದಲ್ಲಿ ಆಲ್ ಪಾರ್ಟಿ ಲೀಡರ್ಸ್‌ನ್ನು ಕರೆದು ಚರ್ಚೆ ಮಾಡುವಂತಹ ಸಮಯದಲ್ಲಿ ಶ್ರೀಮಾನ್